**ಸಾಕ್ಷಿಯನ್ನು ದಿನಾಂಕ 10-06-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.

**ಪಾಟೀ ಸವಾಲುಃ ವಾದಿ ಪರ ಶ್ರೀ ಎ.ಎಂ.ಡಿ.ಕೆ ವಕೀಲರಿಂದಃ**

1. ಸಾಕ್ಷಿಗೆ ಎರಡು ಫೋಟೋ ತೋರಿಸಲಾಯಿತು. ಈಗ ನನಗೆ ತೋರಿಸಲಾದ 2 ಫೋಟೋಗಳಲ್ಲಿ ಕಾಣುವ ಕೇವಲ ಸಿಮೆಂಟ್ ಗಾರೆ ಇರುವ ಕಟ್ಟಡ ನನಗೆ ಸೇರಿದ 'ಶಿವಾಜಿ ರಾವ್' ಮಾಂಸದ ಅಂಗಡಿ ಇರುವ ಕಟ್ಟಡವಾಗಿದೆ. ಸದರಿ ಫೋಟೋದಲ್ಲಿ ಕಾಣುವ ಹಾಗೂ ಬಣ್ಣ ಬಳೆದಿರುವ ಮನೆ ಗೋವಿಂದಪ್ಪ ಮತ್ತು ಗಾಯತ್ರಮ್ಮ ಎಂಬುವವರಿಗೆ ಸೇರಿದೆ. ಮಾಂಸದ ಅಂಗಡಿಯ ಪಕ್ಕದಲ್ಲಿ ಗಿಡ ಬೆಳೆದಿರುವ ಮತ್ತು ಕಸ ಹಾಕಲಾಗಿರುವ ಜಾಗ ಕಂಸರ್ವೆನ್ಸಿ ಜಾಗ ಆಗಿದೆ. ಸಾಕ್ಷಿ ನೋಡಿ ಗುರುತಿಸಿದ ಫೋಟೋಗಳನ್ನು ಈಗ **ನಿಪಿ-39 ಮತ್ತು 40** ಎಂದು ಗುರುತಿಸಲಾಯಿತು.

2. ಈಗ ನನಗೆ ತೋರಿಸಲಾದ ಇನ್ನೆರಡು ಫೋಟೋಗಳಲ್ಲಿ ಕಾಣುವ ಸಿಮೆಂಟ್ ಗಾರೆ ಇರುವ ಮನೆಯ ಸಿಮೆಂಟ್ ಮೇಲ್ಚಾವಣಿ ನನ್ನ ಮಾಂಸದ ಅಂಗಡಿ ಇರುವ ಕಟ್ಟಡ ಆಗಿದೆ. ಸದರಿ ಫೋಟೋಗಳಲ್ಲಿ ಕಾಣುವ ಬಣ್ಣ ಬಳಿಯಲಾದ 2 ಅಂತಸ್ತಿನ ಮನೆ ಗೋವಿಂದಪ್ಪ ಮತ್ತು ಗಾಯತ್ರಮ್ಮ ರವರಿಗೆ ಸೇರಿದೆ. ಸದರಿ ಫೋಟೋಗಳಲ್ಲಿ ಕಾಣುವ ಇನ್ನೊಂದು ಕಟ್ಟಡ ರಾಮಪ್ಪ ಎಂಬುವವರ ಮನೆ. ಸದರಿ ರಾಮಪ್ಪನ ಮನೆ ಮತ್ತು ನನ್ನ ಮಾಂಸದ ಅಂಗಡಿಯ ಕಟ್ಟಡಗಳ ನಡುವೆ ಗಿಡ-ಗಂಟೆ ಬೆಳೆದಿರುವ ಖಾಲಿ ಜಾಗ ಕಂಸರ್ವೆನ್ಸಿ ಗೆ ಸೇರಿದೆ. ಸಾಕ್ಷಿ

ನೋಡಿ ಗುರುತಿಸಿದ ಫೋಟೋಗಳನ್ನು ಈಗ **ನಿಪಿ–41 ಮತ್ತು 42** ಎಂದು ಗುರುತಿಸಲಾಯಿತು.

3. ಈಗ ನನಗೆ ತೋರಿಸಲಾದ ಇನ್ನೆರಡು ಫೋಟೋಗಳಲ್ಲಿ ಕಾಣುವ ವ್ಯಕ್ತಿ ವಾದಿ ಮಂಜಪ್ಪ, ಆತನ ಬಲಬದಿಗೆ ಬೆಳೆದಿರುವ ಗಿಡ–ಗಂಟೆಗಳು ಆದ ನಂತರ ಕಾಣುವ ಗಾರೆ ಮಾಡದ ಇಟ್ಟಿಗೆ ಇರುವ ಗೋಡೆ ನನ್ನ ಮಾಂಸದ ಅಂಗಡಿ ಇರುವ ಕಟ್ಟಡ. ಸದರಿ ಫೋಟೋಗಳಲ್ಲಿ ಕಾಣುವ ಬಣ್ಣ ಬಳಿಯಲಾದ ಮನೆ ವಾದಿ ಮಂಜಪ್ಪನಿಗೆ ಸೇರಿದ್ದು. ಸಾಕ್ಷಿ ಪುನಃ ಸದರಿ ಮನೆ ನನ್ನ ಮಾಂಸದ ಅಂಗಡಿ ಕಟ್ಟಡದ ಪೂರ್ವ ದಿಕ್ಕಿಗೆ ಇದೆ ಎನ್ನುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ಫೋಟೋಗಳನ್ನು ಈಗ **ನಿಪಿ–43 ಮತ್ತು 44** ಎಂದು ಗುರುತಿಸಲಾಯಿತು.

4. ನಿಡಿ–6 ಮತ್ತು 7 ರಂತೆ ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ ನಮೂದಿಸಲಾಗಿರುವ ಸ್ವತ್ತಿನ ಪೂರ್ವ ದಿಕ್ಕಿಗೆ ಇದೆ ಎಂದು ನಮೂದಿಸಲಾಗಿರುವ ಮಂಜಣ್ಣ ರವರ ಮನೆ ಎಂದರೆ ಈ ದಾವೆಯ ವಾದಿ ಮಂಜಪ್ಪನಿಗೆ ಸೇರಿದ ಮನೆ.

5. ನಿಡಿ–7 ರ ಹಕ್ಕು ಪತ್ರದಲ್ಲಿ ಮಂಜೂರು ಮಾಡಲಾಗಿದೆ ಎನ್ನಲಾದ ಆಸ್ತಿಯ ವಿಸ್ತೀರ್ಣವನ್ನು ತಿದ್ದುಪಡಿ ಮಾಡಲಾಗಿದೆ ಎಂದರೆ ಸರಿ. ಸದರಿ ತಿದ್ದುಪಡಿ ಮಾಡಲಾಗಿರುವ ಸ್ಥಳದಲ್ಲಿ ಹಕ್ಕು ಪತ್ರವನ್ನು ವಿತರಿಸಿದ ತಹಶೀಲ್ದಾರ್ ರವರ ಮೇಲು ಸಹಿ ಇಲ್ಲ ಎಂದರೆ ಸರಿ. ಸಾಕ್ಷಿ ಸ್ವ ಇಚ್ಛೆಯಿಂದ ಸದರಿ ತಿದ್ದುಪಡಿ ಮಾಡುವಾಗ ತಹಶೀಲ್ದಾರ್ ರವರು ಇರಲಿಲ್ಲ ಎನ್ನುತ್ತಾರೆ.

ಸಾಕ್ಷಿ ಪುನಃ ಹಕ್ಕು ಪತ್ರದಲ್ಲಿ ಕೊಡಲಾದ ಆಸ್ತಿಯ ವಿಸ್ತೀರ್ಣ 24x50 ಅಡಿ ಇದ್ದು, ಅದನ್ನು ತಪ್ಪಾಗಿ 50x24 ಅಡಿ ಎಂದು ನಮೂದಿಸಲಾಗಿತ್ತು, ಆದ್ದರಿಂದ ನಿಡಿ–7 ರ ದಾಖಲೆಯಲ್ಲಿ ತಿದ್ದುಪಡಿ ಮಾಡಲಾಗಿದೆ ಎನ್ನುತ್ತಾರೆ. ನಿಡಿ–7 ರಲ್ಲಿ ತಿದ್ದುಪಡಿ ಮಾಡಲಾಗಿರುವ ಸ್ಥಳದಲ್ಲಿರುವ ಮೇಲು ಸಹಿ ಯಾರದ್ದು ಎಂಬ ಪ್ರಶ್ನೆಗೆ ಸಾಕ್ಷಿ ಅದು ಶಿರಸ್ತೆದಾರರ ಸಹಿ, ಅವರ ಹೆಸರು ಗೊತ್ತಿಲ್ಲ ಎನ್ನುತ್ತಾರೆ. ಸದರಿ ಮೇಲು ಸಹಿ ಕೆ.ಆರ್ ಪ್ರಶಾಂತ್ ಎಂಬ ರಾಜಸ್ವ ನಿರೀಕ್ಷಕರದ್ದು ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಪ್ರಶಾಂತ್ ರವರು ಹಲವು ಪಂಚಾಯತಿ ದಾಖಲೆಗಳನ್ನು ತಿದ್ದುಪಡಿ ಮಾಡಿರುವ ಅಪಖ್ಯಾತಿ ಹೊಂದಿದ್ದಾರೆ ಎಂದರೆ ಸರಿಯಲ್ಲ.

6. ನಿಡಿ–6 ಮತ್ತು 7 ಹಕ್ಕು ಪತ್ರಗಳನ್ನು ಒಂದೇ ದಿನಾಂಕದಂದು ವಿತರಿಸಲಾಗಿದೆ ಎಂದರೆ ಸರಿ. ಸದರಿ 2 ದಾಖಲೆಗಳನ್ನು ವಿತರಿಸುವಾಗಲೂ ತಹಶೀಲ್ದಾರ್ ರವರು ಉಪಸ್ಥಿತಿ ಇದ್ದರು. ಆಗ ತಹಶೀಲ್ದಾರ್ ರವರು ಇರಲಿಲ್ಲ, ಬದಲಾಗಿ ರಾಜಸ್ವ ನಿರೀಕ್ಷಕ ಪ್ರಶಾಂತ್ ರವರೇ ಸದರಿ 2 ದಾಖಲೆಗಳ ಮೇಲು ತಹಶೀಲ್ದಾರ್ ರವರ ಸಹಿಗಳನ್ನು ನಕಲು ಮಾಡಿ ಸೀಲು ಹಾಕಿದ್ದಾರೆ ಮತ್ತು ಸದರಿಯವರೇ ನಮ್ಮಿಂದ ಹಣ ಪಡೆದು ನಿಡಿ–6 ಮತ್ತು 7 ರ ದಾಖಲೆಗಳನ್ನು ಸೃಷ್ಟಿಮಾಡಿದ್ದಾರೆ ಎಂದರೆ ಸರಿಯಲ್ಲ.

7. ನಿಡಿ–6 ಮತ್ತು 7 ರ ಹಕ್ಕು ಪತ್ರಗಳನ್ನು ಸೃಷ್ಟಿಮಾಡಿಕೊಂಡು ಅದರ ಆಧಾರದ ಮೇಲೆ ವಾದಿಗೆ ಸೇರಿದ ದಾವಾಸ್ತಿಯನ್ನು ಒತ್ತುವರಿ ಮಾಡಿ ನಾನು ಕಟ್ಟಡ ಕಟ್ಟುತ್ತಿದ್ದಾಗ ತಹಶೀಲ್ದಾರ ರವರು ನನಗೆ ನಿ.ಪಿ.–15 ರಂತೆ ನೋಟಿಸು ಕೊಟ್ಟು ಅಕ್ರಮ ಕಾಮಗಾರಿಯನ್ನು

ನಿಲ್ಲಿಸಬೇಕೆಂದು ತಿಳಿಸಿದರು ಎಂದರೆ ಸಾಕ್ಷಿ ನೋಟಿಸು ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ ಮತ್ತು ನಾನು ಯಾವುದೇ ಆಸ್ತಿ ಒತ್ತುವರಿ ಮಾಡಿಲ್ಲ ಎನ್ನುತ್ತಾರೆ. ನಿ.ಪಿ.–15 ರಂತೆ ನೋಟಿಸನ್ನು ಸ್ವೀಕರಿಸಿದ್ದರೂ ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. ನಿಡಿ–6 ಮತ್ತು 7 ರಂತೆ ಹಕ್ಕು ಪತ್ರಗಳನ್ನು ವಿತರಿಸಲಾಗಿರುವ ಜಾಗ ಸರ್ವೆ ನಂಬರ್ 92 ರಲ್ಲಿದೆ. ವಾದಿಯ ದಾವಾಸ್ತಿ ಯಾವ ಸರ್ವೆ ನಂಬರ್ ನಲ್ಲಿದೆ ಎನ್ನುವುದು ನನಗೆ ಗೊತ್ತಿಲ್ಲ. ನನಗೆ ಸೇರಿದ ಆಸ್ತಿ ಮತ್ತು ವಾದಿಗೆ ಸೇರಿದ ದಾವಾಸ್ತಿ ನಿಖರವಾಗಿ ಎಲ್ಲಿದೆ ಎಂಬುವುದನ್ನು ತಿಳಿದುಕೊಳ್ಳಲು ತಹಶೀಲ್ದಾರ್ ರವರು ಸ್ಥಳ ಪರಿವೀಕ್ಷಣೆ ಮಾಡಿಸಿ, ಅಳತೆ ವರದಿ ಪಡೆದುಕೊಂಡಿದ್ದರು ಎಂದರೆ ಸರಿ. ಸದರಿ ವರದಿಯಲ್ಲಿ ಸರ್ವೆ ನಂಬರ್ 92 ಮತ್ತು 93 ಹಿಡುವಳಿ ಜಮೀನುಗಳಾಗಿದ್ದು, ಸರ್ಕಾರದವರು ಅದನ್ನು ಭೂ ಕಂದಾಯ ಕಾಯ್ದೆ ಕಲಂ 94 CC ರಡಿಯಲ್ಲಿ ಮಂಜೂರು ಮಾಡಲು ರಹ ಇಲ್ಲ ಎಂದು ತಿಳಿಸಲಾಗಿತ್ತು ಎನ್ನುವುದು ನನಗೆ ಗೊತ್ತಿಲ್ಲ. ಸ್ಥಳ ಪರಿವೀಕ್ಷಣೆ ಮತ್ತು ಸರ್ಕಾರಿ ಅಧಿಕಾರಿಗಳು ಸರ್ವೆ ಮಾಡಿದ ಸಂದರ್ಭದಲ್ಲಿ ನಿಡಿ–6 ಮತ್ತು 7 ರಲ್ಲಿ ನಮೂದಿಸಲಾಗಿರುವ ಜಾಗ ಸರ್ವೆ ನಂಬರ್ 93 ರಲ್ಲಿದೆ ಎಂದು ವರದಿ ಮಾಡಲಾಗಿದೆ ಎನ್ನುವುದು ನನಗೆ ಗೊತ್ತಿಲ್ಲ.

9. ನಿಡಿ–6 ಮತ್ತು 7 ರಂತೆ ದಾಖಲೆಗಳನ್ನು ಸೃಷ್ಟಿಮಾಡಿಕೊಂಡು ಸರ್ವೆ ನಂಬರ್ 93 ರಲ್ಲಿರುವ ದಾವಾಸ್ತಿಗಳನ್ನು ಕಬಳಿಸಲು ಪ್ರಯತ್ನಿಸುತ್ತಿದ್ದೇನೆ ಎಂದರೆ ಸರಿಯಲ್ಲ.ಸದರಿ ಸೃಷ್ಟಿಮಾಡಿಲಾದ ದಾಖಲೆಗಳ ಆಧಾರದ ಮೇಲೆ ದಾವಾ ಬಿ ಸ್ವತ್ತನ್ನು ಒತ್ತುವರಿ ಮಾಡಿದ್ದೇನೆ ಎಂದರೆ

ಸರಿಯಲ್ಲ. ಸ್ಥಳ ಪರಿವೀಕ್ಷಣೆ ಮತ್ತು ಸರ್ವೆ ಸಂದರ್ಭದಲ್ಲಿ ನಾನು ನಿಡಿ-6 ಮತ್ತು 7 ರ ಬೋಗಸ್ ಪತ್ರಗಳ ಆಧಾರದಲ್ಲಿ ದಾವಾ ಷೆಡ್ಯೂಲ್ ಬಿ ಸ್ವತ್ತನ್ನು ಒತ್ತುವರಿ ಮಾಡಿ ಖಾತೆ ದಾಖಲೆ ಮಾಡಿಸಿಕೊಂಡಿರುವುದರಿಂದ ಸದರಿ ಕಾನೂನು ಬಾಹಿರ ಖಾತೆ ದಾಖಲೆಗಳನ್ನು ರದ್ದುಪಡಿಸಬೇಕೆಂದು, ಆದರೆ ನ್ಯಾಯಾಲಯದಲ್ಲಿ ಈ ಪ್ರಕರಣ ಬಾಕಿ ಇರುವುದರಿಂದ ಸದರಿ ದಾಖಲೆಗಳನ್ನು ರದ್ದುಪಡಿಸಲು ಸಾಧ್ಯವಿಲ್ಲ ಎಂದು ತಹಶೀಲ್ದಾರ್ ರವರು ವಾದಿಗೆ ಹಿಂಬರಹ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಈಗ ನನಗೆ ತೋರಿಸಲಾದ ದಾಖಲೆಯೇ ಸದರಿ ಹಿಂಬರಹ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ದಾಖಲೆಯನ್ನು ನ್ಯಾಯಾಲಯದ ಪರಿಶೀಲನೆ ಉದ್ದೇಶಕ್ಕೆ **ನಿ.ಸಿ-2** ಎಂದು ಗುರುತಿಸಲಾಯಿತು.

10. ದಾವಾ ಷೆಡ್ಯೂಲ್ ಎ ಸ್ವತ್ತನ್ನು ಹೊರತುಪಡಿಸಿ ವಾದಿಗೆ 30x40 ಅಡಿ ವಿಸ್ತೀರ್ಣದ ಮತ್ತೊಂದು ಜಾಗ ಇದೆ. ಅದರ ದಾಖಲೆ ಯಾರ ಹೆಸರಿಗೆ ಇದೆ ಎನ್ನುವುದು ನನಗೆ ಗೊತ್ತಿಲ್ಲ. ದಾವಾ ಷೆಡ್ಯೂಲ್ ಎ ಆಸ್ತಿಯ ಪೂರ್ವ ದಿಕ್ಕಿಗೆ ವಾದಿಯ ಹೆಂಡತಿ ಭಾಗ್ಯರವರ ಹಸೆರಿಗೆ ನಿವೇಶನ ಸಂಖ್ಯೆ 116 ರ ಜಾಗ ಇದೆ ಎಂದರೆ ಸರಿ. ದಾವಾ ಷೆಡ್ಯೂಲ್ ಎ ಆಸ್ತಿಯ ಪಶ್ಚಿಮಕ್ಕೆ ಸರ್ವೆ ನಂಬರ್ 92 ರಲ್ಲಿರುವ ಕಂಸರ್ವೆನ್ಸಿ ಜಾಗ ಇದೆ ಎಂದರೆ ಸರಿ. ಉತ್ತರಕ್ಕೆ ಈ ಹಿಂದೆ ನಗರ ಸಭೆಗೆ ಸೇರಿದ್ದ ಮತ್ತು ಈಗ ನಾಗವೇಣಿ ಎಂಬುವವರು ಒತ್ತುವರಿ ಮಾಡಿ ಸ್ವಾಧೀನ ಹೊಂದಿರುವ ಜಾಗ ಇದೆ ಎಂದರೆ ಸಾಕ್ಷಿ ರಸ್ತೆಯನ್ನು ಯಾರು ಒತ್ತುವರಿ ಮಾಡಿಲ್ಲ ಈಗಲೂ ರಸ್ತೆ ಇದೆ ಎನ್ನುತ್ತಾರೆ. ದಾವಾ ಷೆಡ್ಯೂಲ್ ಎ ಸ್ವತ್ತಿನ ದಕ್ಷಿಣ ದಿಕ್ಕಿಗೆ ನಿವೇಶನ ಸಂಖ್ಯೆ 118 ಇದೆ

ಎಂದರೆ ಸರಿಯಲ್ಲ. ಸಾಕ್ಷಿ ಪುನಃ ದಕ್ಷಿಣಕ್ಕೆ ಕಂಸರ್ವೆನ್ಸಿ ಜಾಗ ಇದೆ ಎನ್ನುತ್ತಾರೆ. ಸಾಕ್ಷಿ ಪುನಃ ದಕ್ಷಿಣಕ್ಕೆ ವಾದಿಗೆ ಸೇರಿದ ಮತ್ತೊಂದು ನಿವೇಶನ ಇದೆ ಮತ್ತು ಅದರ ನಿವೇಶನ ಸಂಖ್ಯೆ ನನಗೆ ಗೊತ್ತಿಲ್ಲ ಎನ್ನುತ್ತಾರೆ.

11. ದಾವಾ ಷೆಡ್ಯೂಲ್ ಎ ಆಸ್ತಿ ಈ ಹಿಂದೆ ಗೌಸ್ ಖಾನ್ ಎಂಬುವವರಿಗೆ ದಿನಾಂಕ 09.09.1981 ರಲ್ಲಿ ಹಕ್ಕು ಪತ್ರದ ಮೂಲಕ ಕೊಡಲಾಗಿತ್ತು ಎಂದರೆ ಸರಿ. ಗೌಸ್ ಖಾನ್ ಹೆಸರಿಗೆ ಸದರಿ ಆಸ್ತಿಯ ಖಾತೆ ದಾಖಲೆಗಳು ಬದಲಾವಣೆಯಾಗಿತ್ತು ಎಂದರೆ ಸಾಕ್ಷಿ ಅವರ ಹೆಸರಿಗೆ ಖಾತೆ ದಾಖಲೆಗಳು ಆಗಿರಲಿಲ್ಲ, ಅವರು ಸ್ವಾಧೀನದಲೂ ಇರಲಿಲ್ಲ ಮತ್ತು ದಾವಾ ಷೆಡ್ಯೂಲ್ ಎ ಸ್ವತ್ತು ಖಾಲಿ ಜಾಗವಾಗಿ ಉಳಿದಿತ್ತು ಹಾಗೂ ವಾದಿ ಇತ್ತಿಚೆಗೆ ಖಾತೆ ದಾಖಲೆಗಳನ್ನು ತಮ್ಮ ಹೆಸರಿಗೆ ಮಾಡಿಸಿಕೊಂಡಿದ್ದಾರೆ ಎನ್ನುತ್ತಾರೆ. ಗೌಸ್ ಖಾನ್ ರವರು ತಮ್ಮ ಜೀವಿತಾವಧಿಯಲ್ಲಿ ದಾವಾ ಷೆಡ್ಯೂಲ್ ಎ ಸ್ವತ್ತನ್ನು ಜರಿನಾ ಖತುನ್ ಎಂಬುವವರಿಗೆ ಮಾರಾಟ ಮಾಡಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಗೌಸ್ ಖಾನ್ ರವರ ನಿಧನದ ನಂತರ ಅವರ ಮಗ ಅಫರೋಜ್ ಅಹಮ್ಮದ್ ಖಾನ್ ಎಂಬುವವರು ದಾವಾ ಷೆಡ್ಯೂಲ್ ಎ ಸ್ವತ್ತನ್ನು ದಿನಾಂಕ 11.09.2012 ರಂದು ಜರಿನಾ ಖಾತುನ್ ರವರಿಂದ ಖರೀದಿ ಮಾಡಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಆ ನಂತರ ಅಫರೋಜ್ ಅಹಮ್ಮದ್ ರವರಿಂದ ವಾದಿ ಸದರಿ ಸ್ವತ್ತನ್ನು ದಿನಾಂಕ 23.02.2015 ರಂದು ನೊಂದಾಯಿತ ಕ್ರಯ ಪತ್ರದ ಮೂಲಕ ಖರೀದಿ ಮಾಡಿದರು ಎಂದರೆ ಸರಿ. ಸದರಿ ಕ್ರಯ ಪತ್ರದ ಆಧಾರದ ಮೇರೆಗೆ ವಾದಿ ಹೆಸರಿಗೆ ಖಾತೆ

ದಾಖಲೆಗಳು ಬದಲಾವಣೆ ಆದವು ಎಂದರೆ ಸಾಕ್ಷಿ ಆಗಿರಬಹುದು ಎನ್ನುತ್ತಾರೆ.

12. ಸರ್ವೆ ನಂಬರ್ 93 ರಲ್ಲಿ ನಿವೇಶನಗಳನ್ನು ಮಾಡುವ ಮೊದಲು ಬಡಾವಣೆ ನಕಾಶೆಯನ್ನು ಸಿದ್ದಪಡಿಸಲಾಗಿತ್ತು ಎನ್ನುವುದು ನನಗೆ ಗೊತ್ತಿಲ್ಲ.

**ಈ ಹಂತದಲ್ಲಿ ವಾದಿ ಪರ ವಕೀಲರು ಕಾಲವಾಕಾಶ ಕೋರಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**